# ರಾಜ್ಯ ಚುನಾವಣಾ ಕಣದಲ್ಲಿ 85 ಕಳಂಕಿತರು

## ■ ಪಟ್ಟಿಯಲ್ಲಿ ಎಚ್‌ಡಿಕೆ, ಧರಂ, ಬಿಎಸ್‌ವೈ, ಜೋಶಿ, ಡಿಕೆಸು ■ ಕಳಂಕಿತರ ಪಟ್ಟಿಯಲ್ಲಿ ಬಿಜೆಪಿ ನಂ.1, ಜೆಡಿಎಸ್ ನಂ.2

**ಬೆಂಗಳೂರು:** ಮತದಾರರೇ, ಈ ಬಾರಿಯ ಲೋಕಸಭಾ ಚುನಾವಣೆ ವೇಳೆ ತುಸು ಎಚ್ಚರದಿಂದ ಮತದಾನ ಮಾಡಿ. ಏಕೆಂದರೆ, ಕಣದಲ್ಲಿರುವ ಒಟ್ಟು 432 ಅಭ್ಯರ್ಥಿಗಳ ಪೈಕಿ 85 ಮಂದಿ ಅಪರಾಧಗಳ ಆರೋಪ ಹೊತ್ತವರಿದ್ದಾರೆ.

ಇಬ್ಬರು ಕೊಲೆ ಆರೋಪಿಗಳು ಸೇರಿದಂತೆ ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವ 55 ಮಂದಿ ಹಾಗೂ ಗಂಭೀರ ಅಪರಾಧದ ಆರೋಪ ಎದುರಿಸುತ್ತಿರುವ 30 ಅಭ್ಯರ್ಥಿಗಳು ಮತಭಿಕ್ಷೆಗಾಗಿ ನಿಮ್ಮ ಬಳಿ ಜೋಳಿಗೆ ಹಿಡಿಯಲಿದ್ದಾರೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಮತ್ತು ಕರ್ನಾಟಕ ಎಲೆಕ್ಷನ್ ವಾಚ್ ಸಂಸ್ಥೆಯು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವ ಅಭ್ಯರ್ಥಿಗಳ ವಿವರ ಹಾಗೂ ಆಸ್ತಿ ಮೌಲ್ಯದ ಮಾಹಿತಿ ಬಿಡುಗಡೆ ಮಾಡಿದೆ. ಇದರ ಪ್ರಕಾರ ರಾಜ್ಯದಲ್ಲಿ ಈ ಬಾರಿ 85 ಮಂದಿ ಅಪರಾಧ ಹಿನ್ನೆಲೆಯವರು ಚುನಾವಣಾ ಕಣದಲ್ಲಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಎಚ್.ಡಿ.ಕುಮಾರಸ್ವಾಮಿ, ಧರಂಸಿಂಗ್, ಬಿಜೆಪಿ ರಾಜ್ಯಾಧ್ಯಕ್ಷ ಪ್ರಹ್ಲಾದ ಜೋಶಿ, ಮಾಜಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ, ಶಿವನಗೌಡ ನಾಯಕ, ಗೂಳಿಹಟ್ಟಿ ಶೇಖರ್, ಹಾಲಿ ಸಂಸದರಾದ ಡಿ.ಕೆ.ಸುರೇಶ್, ಪಿ.ಸಿ.ಮೋಹನ್ ಅವರು ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕ್ರಿಮಿನಲ್ ಪ್ರಕರಣಗಳ ಜತೆಗೆ ವಂಚನೆಯ ಆರೋಪವನ್ನೂ ಎದುರಿಸುತ್ತಿದ್ದಾರೆ.

ಬೆಂಗಳೂರು ದಕ್ಷಿಣ ಹಾಗೂ ಹುಬ್ಬಳ್ಳಿ-ಧಾರವಾಡ ಕ್ಷೇತ್ರದಿಂದ ಸ್ಪರ್ಧಿಸಿರುವ ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್ ಮತ್ತು ಬಿಜೆಪಿಯಿಂದ ಬಳ್ಳಾರಿಯಲ್ಲಿ ಸ್ಪರ್ಧಿಸಿರುವ ಶ್ರೀರಾಮುಲು ಕೊಲೆ ಆರೋಪ ಎದುರಿಸುತ್ತಿರುವ ಅಭ್ಯರ್ಥಿಗಳಾಗಿದ್ದಾರೆ. ಪ್ರಮೋದ್ ಮುತಾಲಿಕ್ ಹಾಗೂ ಶ್ರೀರಾಮುಲು ವಿರುದ್ಧ ತಲಾ 8 ಕ್ರಿಮಿನಲ್ ಪ್ರಕರಣಗಳಿವೆ.

**ಕ್ರಿಮಿನಲ್‌ಗಳು ಬಿಜೆಪಿಯಲ್ಲೇ ಹೆಚ್ಚು!:** ಬಿಜೆಪಿಯಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳಲ್ಲಿ ಹೆಚ್ಚು ಮಂದಿ ಅಪರಾಧ ಹಿನ್ನೆಲೆಯುಳ್ಳವರಾಗಿದ್ದಾರೆ. ಎರಡನೇ ಸ್ಥಾನದಲ್ಲಿ ಜೆಡಿಎಸ್ ಅಭ್ಯರ್ಥಿಗಳಿದ್ದರೆ, ಕಾಂಗ್ರೆಸ್ ಅಭ್ಯರ್ಥಿಗಳು ಮೂರನೇ ಸ್ಥಾನದಲ್ಲಿದ್ದಾರೆ. ಈ ಮಾಹಿತಿ ನೀಡಿದ ಸಂಸ್ಥೆಯ ಹರೀಶ್ ನರಸಪ್ಪ, ಬಿಜೆಪಿಯಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳಲ್ಲಿ ಹೆಚ್ಚು ಮಂದಿ ಅಪರಾಧ ಹಿನ್ನೆಲೆಯುಳ್ಳವರಾಗಿದ್ದು 28 ಅಭ್ಯರ್ಥಿಗಳ ಪೈಕಿ 9 ಮಂದಿ ಕ್ರಿಮಿನಲ್ ಹಾಗೂ 4 ಮಂದಿ ಗಂಭೀರ ಅಪರಾಧ ಪ್ರಕರಣದ ಆರೋಪ ಹೊತ್ತಿದ್ದಾರೆ.

ಅಪರಾಧ ಹಿನ್ನೆಲೆ ಹೊಂದಿರುವ ಅಭ್ಯರ್ಥಿಗಳಲ್ಲಿ ಜೆಡಿಎಸ್ ಎರಡನೇ ಸ್ಥಾನದಲ್ಲಿದ್ದು 25 ಅಭ್ಯರ್ಥಿಗಳ ಪೈಕಿ 8 ಮಂದಿ ಕ್ರಿಮಿನಲ್ ಹಾಗೂ 3 ಮಂದಿ ಗಂಭೀರ ಅಪರಾಧ ಪ್ರಕರಣಗಳ ಆರೋಪ ಎದುರಿಸುತ್ತಿದ್ದಾರೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ 28 ಅಭ್ಯರ್ಥಿಗಳ ಪೈಕಿ 6 ಮಂದಿ ಕ್ರಿಮಿನಲ್ ಹಾಗೂ 4 ಮಂದಿ ಗಂಭೀರ ಅಪರಾಧ ಪ್ರಕರಣದ ಆರೋಪ ಇರುವುದಾಗಿ ಪ್ರಮಾಣ ಪತ್ರದಲ್ಲಿ ಘೋಷಿಸಿಕೊಂಡಿದ್ದಾರೆ ಎಂದು ತಿಳಿಸಿದರು. ಅದೇ ರೀತಿ ಬಿಎಸ್‌ಪಿಯಿಂದ ಸ್ಪರ್ಧಿಸಿರುವ 5 ಅಭ್ಯರ್ಥಿಗಳು ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದು ಇಬ್ಬರು ಗಂಭೀರ ಅಪರಾಧ ಪ್ರಕರಣದ ಆರೋಪ ಎದುರಿಸುತ್ತಿದ್ದಾರೆ. ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ 115 ಮಂದಿಯಲ್ಲಿ 10 ಮಂದಿ ಕ್ರಿಮಿನಲ್, 6 ಮಂದಿ ಗಂಭೀರ ಅಪರಾಧ ಪ್ರಕರಣದ ಆರೋಪ, ಇತರೆ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ 194 ಮಂದಿ ಪೈಕಿ 14 ಮಂದಿ ಕ್ರಿಮಿನಲ್, 9 ಮಂದಿ ಗಂಭೀರ ಅಪರಾಧ ಪ್ರಕರಣದ ಆರೋಪ ಎದುರಿಸುತ್ತಿದ್ದಾರೆ. ಬೆಂಗಳೂರು ಸೆಂಟ್ರಲ್, ಧಾರವಾಡ, ಬೆಳಗಾವಿ, ಬಳ್ಳಾರಿ, ಕೊಪ್ಪಳ, ಬೀದರ್, ಬಿಜಾಪುರ ಹಾಗೂ ಚಿಕ್ಕೋಡಿಯನ್ನು 'ರೆಡ್ ಅಲರ್ಟ್' ಕ್ಷೇತ್ರಗಳು ಎಂದು ಪರಿಗಣಿಸಲಾಗಿದೆ. ಈ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ 3ಕ್ಕೂ ಹೆಚ್ಚು ಅಭ್ಯರ್ಥಿಗಳು ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದಾರೆ ಎಂದು ತಿಳಿಸಿದರು.

**ಕೋಟ್ಯಧೀಶರು:** ಚುನಾವಣಾ ಕಣದಲ್ಲಿರುವ 432 ಅಭ್ಯರ್ಥಿಗಳ ಪೈಕಿ ಶೇ. 27 ರಷ್ಟು ಅಂದರೆ 118 ಅಭ್ಯರ್ಥಿಗಳು ಕೋಟ್ಯಧೀಶರು. ಆ ಪೈಕಿ ಕಾಂಗ್ರೆಸ್‌ನ 28 ಅಭ್ಯರ್ಥಿಗಳ ಪೈಕಿ 27, ಬಿಜೆಪಿಯ 28 ಅಭ್ಯರ್ಥಿಗಳ ಪೈಕಿ 26, ಆಮ್ ಆದ್ಮಿ ಪಕ್ಷದ 28 ಅಭ್ಯರ್ಥಿಗಳ ಪೈಕಿ 12 ಅಭ್ಯರ್ಥಿಗಳು 1 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಆಸ್ತಿ ಹೊಂದಿರುವುದಾಗಿ ಘೋಷಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಸ್ಪರ್ಧಿಸಿರುವ ಒಟ್ಟು ಅಭ್ಯರ್ಥಿಗಳ ಸರಾಸರಿ ಆಸ್ತಿ 22.98 ಕೋಟಿ ರೂ. ಆಗಿದೆ ಎಂದರು.

ಆಯಾ ಪಕ್ಷಗಳ ಅಭ್ಯರ್ಥಿಗಳ ಒಟ್ಟಾರೆ ಆಸ್ತಿ ಸೇರಿಸಿದರೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ 28 ಅಭ್ಯರ್ಥಿಗಳ ಸರಾಸರಿ ಆಸ್ತಿ 293.75 ಕೋಟಿ ರೂ. ಬಿಜೆಪಿಯ 28 ಅಭ್ಯರ್ಥಿಗಳ ಸರಾಸರಿ ಆಸ್ತಿ 14.65 ಕೋಟಿ ರೂ., ಜೆಡಿಎಸ್‌ನ 25 ಅಭ್ಯರ್ಥಿಗಳ ಸರಾಸರಿ ಆಸ್ತಿ 30.40 ಕೋಟಿ ರೂ., ಆಮ್ ಆದ್ಮಿ ಪಾರ್ಟಿಯ 28 ಅಭ್ಯರ್ಥಿಗಳ ಸರಾಸರಿ ಆಸ್ತಿ 8.49 ಕೋಟಿ ರೂ. ಆಗಲಿದೆ ಎಂದು ಹರೀಶ್ ನರಸಪ್ಪ ಹೇಳಿದರು. ವಾಸುದೇವ ಶರ್ಮಾ, ತ್ರಿಲೋಚನಾ ಶಾಸ್ತ್ರಿ ವಂದನಾರೆಡ್ಡಿ ಉಪಸ್ಥಿತರಿದ್ದರು.

**55** ಮಂದಿ ವಿರುದ್ಧ ಕ್ರಿಮಿನಲ್ ಆರೋಪ

**30** ಅಭ್ಯರ್ಥಿಗಳ ವಿರುದ್ಧ ಗಂಭೀರ ಅಪರಾಧದ ಕೇಸು

### ಟಾಪ್-7 ಶ್ರೀಮಂತರು ಕೋಟಿ ರೂ.ಗಳಲ್ಲಿ

| | | | | |
|---|---|---|---|---|
| 1 | ನಂದನ್ ನಿಲೇಕಣಿ | ಕಾಂಗ್ರೆಸ್ | ಬೆಂಗಳೂರು ದಕ್ಷಿಣ | 7710 |
| 2 | ಪ್ರಭಾಕರರೆಡ್ಡಿ | ಜೆಡಿಎಸ್ | ಬೆಂಗಳೂರು ಗ್ರಾಮಾಂತರ | 224 |
| 3 | ವಿ.ಬಾಲಕೃಷ್ಣನ್ | ಆಮ್ ಆದ್ಮಿ ಪಾರ್ಟಿ | ಬೆಂಗಳೂರು ಸೆಂಟ್ರಲ್ | 189 |
| 4 | ಎಚ್.ಡಿ.ಕುಮಾರಸ್ವಾಮಿ | ಜೆಡಿಎಸ್ | ಚಿಕ್ಕಬಳ್ಳಾಪುರ | 167 |
| 5 | ಪ್ರಶಾಂತ್ ದೇಶಪಾಂಡೆ | ಕಾಂಗ್ರೆಸ್ | ಉತ್ತರ ಕನ್ನಡ | 99 |
| 6 | ನಸೀರ್ ಬಾಗವಾನ್ | ಜೆಡಿಎಸ್ | ಬೆಳಗಾವಿ | 96 |
| 7 | ಡಿ.ಕೆ.ಸುರೇಶ್ | ಕಾಂಗ್ರೆಸ್ | ಬೆಂಗಳೂರು ಗ್ರಾಮಾಂತರ | 85 |

### 190 ಮಂದಿ ಪಿಯುಸಿ ಪಾಸ್

**432** ಅಭ್ಯರ್ಥಿಗಳ ಪೈಕಿ 190 ಅಭ್ಯರ್ಥಿಗಳು ದ್ವಿತೀಯ ಪಿಯುಸಿ ಹಾಗೂ ಅದಕ್ಕಿಂತ ಕಡಿಮೆ ಶಿಕ್ಷಣ ಪಡೆದವರು. 217 ಅಭ್ಯರ್ಥಿಗಳು ಪದವಿ ಮೇಲ್ಪಟ್ಟು ಶಿಕ್ಷಣ ಪಡೆದವರು. 6 ಅಭ್ಯರ್ಥಿಗಳು ಶಾಲಾ ಶಿಕ್ಷಣವನ್ನೇ ಪಡೆದಿಲ್ಲ. 432 ಅಭ್ಯರ್ಥಿಗಳಲ್ಲಿ 261 ಅಭ್ಯರ್ಥಿಗಳು 25 ರಿಂದ 50 ವಯಸ್ಸಿನವರು. 150 ಅಭ್ಯರ್ಥಿಗಳು 51 ರಿಂದ 70 ವಯಸ್ಸಿನವರು. 17 ಅಭ್ಯರ್ಥಿಗಳು 71 ರಿಂದ 80 ವಯಸ್ಸಿನವರು. ಒಬ್ಬ ಅಭ್ಯರ್ಥಿ ಮಾತ್ರ 89 ವರ್ಷ ಮೇಲ್ಪಟ್ಟವರು. 432 ಅಭ್ಯರ್ಥಿಗಳ ಪೈಕಿ 21 ಮಹಿಳಾ ಅಭ್ಯರ್ಥಿಗಳು ಎಂದು ವಿವರಿಸಿದರು.

### ಯಾರ ವಿರುದ್ಧ ಎಷ್ಟು ಕೇಸು?

| | |
|---|---|
| ಬಿ.ಎಸ್.ಯಡಿಯೂರಪ್ಪ | 9 ಕೇಸು |
| ಪ್ರಮೋದ್ ಮುತಾಲಿಕ್ | 8 ಕೇಸು |
| ಬಿ.ಶ್ರೀರಾಮುಲು | 8 ಕೇಸು |
| ಧರಂಸಿಂಗ್ | 1 ಕೇಸು |
| ಎಚ್.ಡಿ.ಕುಮಾರಸ್ವಾಮಿ | 1 ಕೇಸು |
| ಶ್ರೀಮಂತ ಪಾಟೀಲ್ | 5 ಕೇಸು |
| ಕೋಲಾರ ಕೇಶವ | 5 ಕೇಸು |
| ಎಸ್.ಎಸ್.ಮಲ್ಲಿಕಾರ್ಜುನ್ | 6 ಕೇಸು |
| ನಂದಿನಿ ಆಳ್ವಾ | 3 ಕೇಸು |
| ಪ್ರಕಾಶ್ ರಾಥೋಡ್ | 3 ಕೇಸು |
| ರಿಜ್ವಾನ್ ಅರ್ಷದ್ | 2 ಕೇಸು |
| ಡಿ.ಕೆ.ಸುರೇಶ್ | 7 ಕೇಸು |
| ರಮೇಶ್ ಜಿಗಜಿಣಗಿ | 3 ಕೇಸು |
| ಎಂ.ಶಿವಣ್ಣ | 3 ಕೇಸು |
| ಪಿ.ಸಿ.ಮೋಹನ್ | 2 ಕೇಸು |
| ವಿನಯ್ ಕುಲಕರ್ಣಿ | 2 ಕೇಸು |
| ನಳಿನ್ ಕುಮಾರ್ ಕಟೀಲ್ | 1 ಕೇಸು |
| ಜಿ.ವಿ.ಶ್ರೀರಾಮರೆಡ್ಡಿ | 1 ಕೇಸು |
| ಸುರೇಶ್ ಅಂಗಡಿ | 1 ಕೇಸು |
| ಶಿವನಗೌಡ ನಾಯಕ್ | 1 ಕೇಸು |
| ಪ್ರಹ್ಲಾದ್ ಜೋಶಿ | 1 ಕೇಸು |
| ಸಂಗಣ್ಣ ಎ.ಕರಡಿ | 1 ಕೇಸು |
| ಗೂಳಿಹಟ್ಟಿ ಡಿ.ಶೇಖರ್ | 1 ಕೇಸು |

### ಪಂಚ್‌ರ್!

**ಡೈಸಿ ಷಾಗೆ ನಂಬರ್ ಟೂ ಆಗೋದಕ್ಕಿಷ್ಟ ಅಂತೆ.**

-ರಾಜಕೀಯದಲ್ಲೂ ನಂಬರ್ ಟೂ ಆಗಬೇಕು ಅಂತಿರೋರು ಬೇಕಾದಷ್ಟು ಮಂದಿ ಇದ್ದಾರೆ.

## ಕೇಜ್ರಿವಾಲ್‌ಗೆ ಕಪಾಳಮೋಕ್ಷ

**1ನೇ ಪುಟದಿಂದ ▶**ಇದರಿಂದ ಕುಪಿತಗೊಂಡ ಎಎಪಿ ಬೆಂಬಲಿಗರು ಆತನಿಗೆ ಥಳಿಸಿದ್ದಾರೆ. ಬಳಿಕ ಪೊಲೀಸರು ಆ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದಾರೆ. ಈ ಘಟನೆಗೆ ಬಿಜೆಪಿಯೇ ಹೊಣೆ ಎಂದು ಎಎಪಿ ಆರೋಪಿಸಿದೆ.

**ಸನ್ಮಾನಿಸುವುದಾಗಿ ಸುಳ್ಳು ಎಸ್ಸೆಮ್ಮೆಸ್!:** ಕೇಜ್ರಿವಾಲ್‌ಗೆ ಕಪಾಳಮೋಕ್ಷ ಮಾಡಿದ ಲಾಲಿ, ದೆಹಲಿ ಹೊರವಲಯದ ಅಮನ್ ವಿಹಾರ್ ನಿವಾಸಿಯಾಗಿದ್ದಾನೆ. ಕೇಜ್ರಿವಾಲ್ ಆಟೋ ರಿಕ್ಷಾ ಚಾಲಕರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ ಎಂದು ಆರೋಪಿಸಿದ್ದಾನೆ. ದಾಳಿ ನಡೆಸುವುದಕ್ಕೂ ಮುನ್ನ ನಿಮ್ಮನ್ನು ರ್‍ಯಾಲಿಯ ವೇಳೆ ಸನ್ಮಾನಿಸುವುದಾಗಿ ಆತ ಕೇಜ್ರಿವಾಲ್‌ಗೆ ಎಸ್ಸೆಮ್ಮೆಸ್ ಸಂದೇಶ ಕಳುಹಿಸಿದ್ದ ಎನ್ನಲಾಗಿದೆ. 'ಕಪಾಳ ಮೋಕ್ಷದಿಂದ ಕೇಜ್ರಿವಾಲ್ ಅವರ ಕಣ್ಣಿಗೆ ಗಾಯವಾಗಿದೆ. ಅವರ ಕನ್ನಡಕ ಒಡೆದಿದೆ' ಎಂದು ಎಎಪಿ ಮುಖಂಡ ಮನೀಶ್ ಸಿಸೋಡಿಯಾ ಟ್ವೀಟ್ ಮಾಡಿದ್ದಾರೆ. ಘಟನೆ ಬಳಿಕ ಗಾಂಧಿ ಸಮಾಧಿ ಇರುವ ರಾಜಘಾಟ್‌ಗೆ ತೆರಳಿದ ಕೇಜ್ರಿವಾಲ್ ಮತ್ತು ಆಪ್ತರು 'ಶಾಂತಿ ಮಂತ್ರ' ಪಠಿಸಿದರು.

**ಕೇಜ್ರಿ ಸಿಡಿಮಿಡಿ:** ಘಟನೆ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿರುವ ಕೇಜ್ರಿವಾಲ್, 'ಕೆಲ ವ್ಯಕ್ತಿಗಳು ಪ್ರಧಾನ ಮಂತ್ರಿಯಾಗುವ ಸಲುವಾಗಿ ಬೇರೆ ದಾರಿ ಕಾಣದೇ ಹಿಂಸಾಚಾರಕ್ಕೆ ಇಳಿದಿದ್ದಾರೆ. ನಮ್ಮ ಮೇಲೆ ದಾಳಿ ಮಾಡುವ ಮೂಲಕ ನಮ್ಮನ್ನು ಸುಮ್ಮನಾಗಿಸಬಹುದು ಎಂದು ತಿಳಿದುಕೊಂಡಿದ್ದರೆ, ಅದು ತಪ್ಪು ಗ್ರಹಿಕೆ. ಕೊನೆಯ ಉಸಿರು ಇರುವ ವರೆಗೂ ಈ ಹೋರಾಟವನ್ನು ಮುಂದುವರಿಸುತ್ತೇವೆ' ಎಂದು ಹೇಳಿದ್ದಾರೆ. ಇಷ್ಟೆಲ್ಲ ಘಟನೆಗಳ ಹೊರತಾಗ್ಯೂ ತಾವು ಪೊಲೀಸ್ ಭದ್ರತೆ ಪಡೆಯುವುದಿಲ್ಲ ಎಂದು ಕೇಜ್ರಿವಾಲ್ ಸ್ಪಷ್ಟಪಡಿಸಿದ್ದಾರೆ.

### ಕೇಜ್ರಿ ಮೇಲೆ ಇತ್ತೀಚಿನ ದಾಳಿ

- ■ **ಮಾ.25: ವಾರಾಣಸಿಯಲ್ಲಿ ರೋಡ್‌ಶೋ ವೇಳೆ ಕೇಜ್ರಿವಾಲ್ ಮೇಲೆ ಮೊಟ್ಟೆ ಎಸೆತ, ಮುಖಕ್ಕೆ ಮಸಿ**
- ■ **ಮಾ.28: ಹರ್ಯಾಣದಲ್ಲಿ ರ್‍ಯಾಲಿ ವೇಳೆ ಶಂಕಿತ ಅಣ್ಣಾ ಹಜಾರೆ ಬೆಂಬಲಿಗನಿಂದ ದಾಳಿ ಯತ್ನ**
- ■ **ಏ.4: ದೆಹಲಿಯ ದಕ್ಷಿಣಪುರಿಯಲ್ಲಿ ಬೆನ್ನಿಗೆ ಗುದ್ದಿದ 19 ವರ್ಷದ ಯುವಕ**

## 2ನೇ ಹಂತ: ಇಂದು ಮತ

**1ನೇ ಪುಟದಿಂದ ▶**ಇನ್ನು ದಿಲ್ಲಿ ಸೇರಿ 3 ಕೇಂದ್ರಾಡಳಿತ ಪ್ರದೇಶಗಳು ಮತ್ತು 11 ರಾಜ್ಯಗಳ 92 ಕ್ಷೇತ್ರಗಳಿಗೆ ಗುರುವಾರ 3ನೇ ಹಂತದಲ್ಲಿ ಮತದಾನ ನಡೆಯಲಿದೆ.

**ಈಶಾನ್ಯ ಮಹಾಸಮರ:** ಲೋಕಸಭೆಗೆ ನಾಗಾಲ್ಯಾಂಡ್ ಹಾಗೂ ಮಣಿಪುರದಲ್ಲಿ ತಲಾ ಒಂದು ಕ್ಷೇತ್ರ ಮತ್ತು ಅರುಣಾಚಲ ಪ್ರದೇಶ ಹಾಗೂ ಮೇಘಾಲಯದಲ್ಲಿ ತಲಾ ಎರಡು ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ನಾಗಾಲ್ಯಾಂಡ್‌ನಲ್ಲಿ ಒಂದೇ ಲೋಕಸಭೆ ಕ್ಷೇತ್ರವಿದ್ದು, ಅಲ್ಲಿ ಎನ್‌ಪಿಎಫ್‌ನಿಂದ ಮುಖ್ಯಮಂತ್ರಿ ನೇಫ್ಯು ರಿಯೋ ಸ್ಪರ್ಧಿಸಿದ್ದಾರೆ. ಮಣಿಪುರದಲ್ಲಿ ಎರಡು ಲೋಕಸಭೆ ಕ್ಷೇತ್ರಗಳಿದ್ದು, ಬುಧವಾರ ಒಂದು ಕ್ಷೇತ್ರದಲ್ಲಿ ಮತದಾನ ನಡೆಯಲಿದೆ. ಇನ್ನೊಂದು ಕ್ಷೇತ್ರಕ್ಕೆ ಏ.17ರಂದು ಮತದಾನ ನಡೆಯಲಿದೆ. ಅರುಣಾಚಲ ಪ್ರದೇಶ ಹಾಗೂ ಮೇಘಾಲಯದಲ್ಲಿ ತಲಾ 2 ಲೋಕಸಭಾ ಕ್ಷೇತ್ರಗಳಿದ್ದು, 2ಕ್ಕೂ ಬುಧವಾರ ಮತದಾನ ನಡೆಯಲಿದೆ. ಮೇಘಾಲಯದ ತುರಾ ಕ್ಷೇತ್ರದಿಂದ ಎನ್‌ಪಿಪಿ ಮುಖ್ಯಸ್ಥ ಪಿ.ಎ.ಸಂಗ್ಮಾ ಸ್ಪರ್ಧಿಸಿದ್ದಾರೆ.

**ಮಿಜೋರಂ ಚುನಾವಣೆ ಮುಂದಕ್ಕೆ:** ಎರಡನೇ ಹಂತದಲ್ಲಿ ಏ.9ರಂದು ನಡೆಯಬೇಕಿದ್ದ ಮಿಜೋರಂನ ಏಕೈಕ ಲೋಕಸಭಾ ಕ್ಷೇತ್ರದ ಚುನಾವಣೆಯನ್ನು ಏ.11ಕ್ಕೆ ಮುಂದೂಡಲಾಗಿದೆ. 'ಬ್ರು' ಮತದಾರರಿಗೆ ತ್ರಿಪುರಾದ ನಿರಾಶ್ರಿತರ ಕ್ಯಾಂಪ್‌ಗಳಿಂದ ಅಂಚೆ ಮತದಾನ ಮಾಡಲು ಅವಕಾಶ ನೀಡಿದ್ದನ್ನು ಖಂಡಿಸಿ ಕೆಲ ಸಂಘಟನೆಗಳು ರಾಜ್ಯ ಬಂದ್‌ಗೆ ಕರೆ ನೀಡಿರುವುದರಿಂದ ಚುನಾವಣೆ ಮುಂದೂಡಲಾಗಿದೆ. 1997ರಲ್ಲಿ ಮಿಜೋರಂನಲ್ಲಿ ಜನಾಂಗೀಯ ದಂಗೆ ನಡೆದಾಗ ರಿಯಾಂಗ್ (ಬ್ರು) ಜನಾಂಗದವರು ತ್ರಿಪುರಾಕ್ಕೆ ಪಲಾಯನ ಮಾಡಿದ್ದರು. ಇಂದಿಗೂ ಅವರು ಅಲ್ಲಿನ ನಿರಾಶ್ರಿತರ ಕ್ಯಾಂಪ್‌ಗಳಲ್ಲಿದ್ದಾರೆ. ಅವರಿಗೆ ಈ ಬಾರಿ ಮಿಜೋರಂ ಚುನಾವಣೆಯಲ್ಲಿ ಮತದಾನದ ಹಕ್ಕು ನೀಡಲಾಗಿದ್ದು, ಅದನ್ನು ವಿರೋಧಿಸಿ ಬಂದ್ ಕರೆ ನೀಡಲಾಗಿತ್ತು. ಮಂಗಳವಾರ ಅದನ್ನು ವಾಪಸ್ ಪಡೆಯಲಾಗಿದೆ.

**2ನೇ ಹಂತದ ಚುನಾವಣೆ**

- ● ರಾಜ್ಯಗಳು...........4
- ● ಲೋಕಸಭಾ ಕ್ಷೇತ್ರ..6
- ● ನಾಗಾಲ್ಯಾಂಡ್......1
- ● ಮಣಿಪುರ............1
- ● ಅರುಣಾಚಲ ಪ್ರದೇಶ..2
- ● ಮೇಘಾಲಯ.......2

## ಗೋವಾಕ್ಕೆ ಸಾಗಿಸುತ್ತಿದ್ದ 62 ಕಪ್ಪೆ ವಶ

**ಕಾರವಾರ:** ಉತ್ತರ ಕನ್ನಡ ಜಿಲ್ಲೆ ಕಾರವಾರದಲ್ಲಿ ಮಂಗಳವಾರ ಗೋವಾಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 62 ಕಪ್ಪೆಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದು, ಈ ಸಂಬಂಧ ಅಂಕೋಲಾದ ಸುರೇಶ ಕುರುಬರ(42) ಎಂಬಾತನನ್ನು ಬಂಧಿಸಿದ್ದಾರೆ.



**ಗೋವಾದ ಸ್ಟಾರ್ ಹೋಟೆಲ್‌ಗಳಿಗೆ ಕಪ್ಪೆಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ ಸಿಕ್ಕಿಬಿದ್ದ ಸುರೇಶ ಕುರುಬರ.**

ಅಂಕೋಲಾದಿಂದ ಕಾರವಾರಕ್ಕೆ ಬರುತ್ತಿದ್ದ ಬಸ್ಸಿನಲ್ಲಿ ಕಪ್ಪೆಗಳು ತುಂಬಿದ ಚೀಲ ತರುತ್ತಿರುವುದನ್ನು ಗಮನಿಸಿದ ಪ್ರಯಾಣಿಕನೊಬ್ಬ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ. ಕೂಡಲೇ ಕಾರ್ಯಪ್ರವೃತ್ತರಾದ ಅರಣ್ಯ ಇಲಾಖೆಯ ಅಧಿಕಾರಿಗಳು ಬಸ್‌ಗಾಗಿ ಕಾದು ನಿಂತಿದ್ದರು. ನಗರದ ಮಿತ್ರ ಸಮಾಜ ಮೈದಾನದ ಬಳಿ ಬಸ್ ಆಗಮಿಸುತ್ತಿದ್ದಂತೆ ದಾಳಿ ನಡೆಸಿದ ಅಧಿಕಾರಿಗಳು, 62 ಕಪ್ಪೆಗಳಿದ್ದ ಚೀಲವನ್ನು ವಶಪಡಿಸಿಕೊಂಡರು. ಜತೆಗೆ ಇದನ್ನು ತರುತ್ತಿದ್ದ ಸುರೇಶನನ್ನೂ ಬಂಧಿಸಿದರು.

ನಂತರ ಕಪ್ಪೆಗಳನ್ನು ತಾಲೂಕಿನ ಮಖೇರಿಯ ಕೆರೆಯಲ್ಲಿ ಬಿಡಲಾಯಿತು. ಗೋವಾದ ಸ್ಟಾರ್ ಹೋಟೆಲ್‌ಗಳಿಗೆ ಈ ಕಪ್ಪೆಗಳನ್ನು ಸಾಗಿಸಲಾಗುತ್ತಿತ್ತು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಇನ್ನೂ 2 ದಿನ ಮಳೆ ಸಂಭವ

**ಬೆಂಗಳೂರು:** ರಾಜ್ಯದ ಹಲವೆಡೆ ಸುರಿಯುತ್ತಿರುವ ಮಳೆ ಇನ್ನೂ ಎರಡು-ಮೂರು ದಿನಗಳ ಕಾಲ ಮುಂದುವರಿಯುವ ಸಾಧ್ಯತೆ ಇದೆ. ಬಿರು ಬೇಸಿಗೆಯಲ್ಲಿ ಸುರಿಯುತ್ತಿರುವ ಈ ಮಳೆಯಿಂದಾಗಿ ಬಿಸಿಲಿನಿಂದ ಕಂಗೆಟ್ಟ ಜನ ತುಸು ನಿಟ್ಟುಸಿರುಬಿಡುವಂತಾಗಿದೆ.

ಮುಂದಿನ ಎರಡು ದಿನಗಳಲ್ಲಿ ಕರಾವಳಿ ಮತ್ತು ಉತ್ತರ ಒಳನಾಡಿನಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ವಿಶೇಷವಾಗಿ ಘಟ್ಟಪ್ರದೇಶ ಹಾಗೂ ಉತ್ತರ ಒಳನಾಡಿನಲ್ಲಿ ಮಳೆ ಪ್ರಭಾವ ಹೆಚ್ಚಿರುತ್ತದೆ. ದಕ್ಷಿಣ ಒಳನಾಡಿನಲ್ಲಿ ಒಣಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ನಿರ್ದೇಶಕ ಬಿ. ಪುಟ್ಟಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ನಡುವೆ ಮಂಗಳವಾರ ರಾಜ್ಯದಲ್ಲಿ ಗರಿಷ್ಠ 41.7 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾದ ಗುಲ್ಬರ್ಗದ ಚಿಂಚೋಳಿಯೂ ಸೇರಿದಂತೆ ಹಲವೆಡೆ ವರುಣ ಅಬ್ಬರಿಸಿದ್ದಾನೆ. ಮಂಡ್ಯದ ವಿಠಲಾಪುರದಲ್ಲಿ 59.5 ಮಿ.ಮೀ., ಉಡುಪಿಯ ಕಾರ್ಕಳ ಸುತ್ತಮುತ್ತ 58.5 ಮಿ.ಮೀ., ಚಿಕ್ಕಮಗಳೂರಿನ ಮೂಡಿಗೆರೆಯಲ್ಲಿ 55.5 ಮಿ.ಮೀ ಮಳೆಯಾಗಿದೆ.

### ರಾಜ್ಯದ ಹಲವೆಡೆ ತಂಪೆರೆದ ಬೇಸಿಗೆ ಮಳೆ

**1ನೇ ಪುಟದಿಂದ ▶**ಪುತ್ತೂರು, ಕುಕ್ಕೆ ಸುಬ್ರಹ್ಮಣ್ಯದಲ್ಲಿ ಗುಡುಗು ಮಿಶ್ರಿತ ಮಳೆ ಸುರಿದಿದೆ. ಕುಕ್ಕೆಯಲ್ಲಿ ಸಭಾಭವನವೊಂದರ ತಗಡಿನ ಶೀಟ್‌ಗಳು ಹಾರಿ ಹೋಗಿವೆ.

**■ ಇತರೆಡೆಯೂ ಮಳೆ:** ಈ ಮಧ್ಯೆ, ಮಲೆನಾಡು, ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಅಲ್ಲಲ್ಲಿ ಮಳೆಯಾಗಿದೆ. ಬಳ್ಳಾರಿಯಲ್ಲಿ ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ಸುರಿದ ಬಿರುಗಾಳಿ ಸಹಿತ ಧಾರಾಕಾರ ಮಳೆ ರಸ್ತೆ ಸಂಚಾರ ಸ್ಥಗಿತಗೊಂಡಿತ್ತು. ಕೆಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಇದಲ್ಲದೆ, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಮೈಸೂರಿನ ಹಲವೆಡೆ, ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯಲ್ಲಿ ಮಳೆಯಾಗಿದೆ.

## ಮಂಗಳೂರಿನಲ್ಲಿ ಐಎಂ ಉಗ್ರರ ವಿಚಾರಣೆ

**ಮಂಗಳೂರು:** ಇಂಡಿಯನ್ ಮುಜಾಹಿದ್ದೀನ್ (ಐಎಂ) ಸಂಸ್ಥಾಪಕ ಯಾಸೀನ್ ಭಟ್ಕಳ್ ಸಹಚರರಾದ ತೆಹ್ಸೀನ್ ಅಖ್ತರ್ ಅಲಿಯಾಸ್ ಮೋನು ಹಾಗೂ ಜಿಯಾ ಉರ್ ರೆಹಮಾನ್ ಅಲಿಯಾಸ್ ವಖಾಸ್ ಅವರನ್ನು ದಿಲ್ಲಿಯ ವಿಶೇಷ ಪೊಲೀಸ್ ಪಡೆಯ ಅಧಿಕಾರಿಗಳು ಮಂಗಳವಾರ ಮಂಗಳೂರಿಗೆ ಕರೆ ತಂದು ಹೆಚ್ಚಿನ ವಿಚಾರಣೆ ನಡೆಸಿದರು.

8 ಮಂದಿಯ ವಿಶೇಷ ಪೊಲೀಸ್ ಪಡೆ, ವಿಶೇಷ ವಿಮಾನದ ಮೂಲಕ ಉಗ್ರರನ್ನು ಬಜಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕರೆ ತಂದಿತ್ತು. ಅಲ್ಲಿಂದ ವಿಶೇಷ ವಾಹನದ ಮೂಲಕ ಅತ್ತಾವರ, ಉಳ್ಳಾಲ ಸೇರಿದಂತೆ ನಗರದ ಕೆಲವು ಕಡೆಗಳಿಗೆ ಕರೆದೊಯ್ದು ವಿಚಾರಣೆ ನಡೆಸಿದೆ. ವಖಾಸ್‌ನನ್ನು ಮಾ. 22ರಂದು ಅಜ್ಮೇರ್‌ನಲ್ಲಿ ಹಾಗೂ ತೆಹ್ಸೀನ್ ಅಖ್ತರ್ ಅಲಿಯಾಸ್ ಮೋನುನನ್ನು ಮಾ. 25ರಂದು ಭಾರತ -ನೇಪಾಳ ಗಡಿಯ ಪಾನಿಟಾಂಕಿ ಎಂಬಲ್ಲಿ ಬಂಧಿಸಲಾಗಿತ್ತು.

ಯಾಸಿನ್ ಭಟ್ಕಳ್ ಜತೆಗೆ ವಖಾಸ್ ಹಾಗೂ ಅಖ್ತರ್ ಮಂಗಳೂರಿನ ಅತ್ತಾವರದ ಝೆಫಿಯರ್ ಹೈಟ್ಸ್ ಕಟ್ಟಡದಲ್ಲಿ ತಂಗಿದ್ದರು. ಇಲ್ಲಿದ್ದುಕೊಂಡೆ ವಖಾಸ್ ಹೈದರಾಬಾದ್‌ನಲ್ಲಿ ಸ್ಫೋಟ ನಡೆಸಲು ಬಾಂಬ್ ತಯಾರಿಸಿದ್ದ.

## ಮಿನಿ ಸುದ್ದಿ

### ■ ರಾಜ್ಯ ಸರ್ಕಾರಿ ನೌಕರರ ತುಟ್ಟಿ ಭತ್ಯೆ ಬಿಡುಗಡೆ

**ಬೆಂಗಳೂರು:** ಕೇಂದ್ರ ಸರ್ಕಾರದ ಮಾದರಿಯಲ್ಲೇ ರಾಜ್ಯ ಸರ್ಕಾರಿ ನೌಕರರಿಗೂ 2014ರ ಜನವರಿ 1ರಿಂದ ಪೂರ್ವಾನ್ವಯವಾಗುವಂತೆ ಶೇ.6ರಷ್ಟು ತುಟ್ಟಿ ಭತ್ಯೆಯನ್ನು ನಗದು ರೂಪದಲ್ಲಿ ಬಿಡುಗಡೆ ಮಾಡಿ ರಾಜ್ಯ ಸರ್ಕಾರ ಮಂಗಳವಾರ ಆದೇಶಿಸಿದೆ. ಜಿಲ್ಲಾ ಪಂಚಾಯ್ತಿಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಯಲ್ಲಿರುವ ಪೂರ್ಣಾವಧಿ ವರ್ಕ್ ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳಿಗೆ ಈ ಆದೇಶ ಅನ್ವಯವಾಗುತ್ತದೆ. ನಿವೃತ್ತ ನೌಕರರಿಗೂ ತುಟ್ಟಿಭತ್ಯೆಯನ್ನು ಶೇ. 15ರಿಂದ ಶೇ. 21ಕ್ಕೆ ಹೆಚ್ಚಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

### ■ ಐಪಿಎಸ್‌ಗಳ ಬೇಕಾಬಿಟ್ಟಿ ಎತ್ತಂಗಡಿಗೆ ಕಡಿವಾಣ

**ಬೆಂಗಳೂರು:** ಐಪಿಎಸ್ ಅಧಿಕಾರಿಗಳು ಒಂದು ಹುದ್ದೆಯಲ್ಲಿ ಕನಿಷ್ಠ 2 ವರ್ಷ ಸೇವೆ ಸಲ್ಲಿಸಬೇಕು ಎಂಬ ನಿಯಮವನ್ನು ರಾಜ್ಯದಲ್ಲೂ ಕಡ್ಡಾಯಗೊಳಿಸಿರುವುದಾಗಿ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಹೇಳಿಕೆ ನೀಡಿದೆ. ಈಗಾಗಲೇ ಐಎಎಸ್, ಐಎಫ್‌ಎಸ್ ಅಧಿಕಾರಿಗಳಿಗೆ ಈ ನಿಯಮ ಜಾರಿಯಲ್ಲಿದೆ. ಐಪಿಎಸ್ ಅಧಿಕಾರಿಗಳ ಕನಿಷ್ಠ ಸೇವಾ ಅವಧಿಯನ್ನು 2 ವರ್ಷಕ್ಕೆ ನಿಗದಿಗೊಳಿಸಿರುವುದಕ್ಕೆ ಸಂಬಂಧಿಸಿದ ಅಧಿಸೂಚನೆ ಪ್ರತಿಯನ್ನು ಮಂಗಳವಾರ ಮುಖ್ಯ ನ್ಯಾಯಮೂರ್ತಿ ಡಿ.ಎಚ್. ವಘೇಲಾ ನೇತೃತ್ವದ ವಿಭಾಗೀಯ ಪೀಠಕ್ಕೆ ಸರ್ಕಾರ ಸಲ್ಲಿಸಿತು. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಐಪಿಎಸ್ ಅಧಿಕಾರಿಗಳಿಗೆ ಒಂದು ಸ್ಥಳದಲ್ಲಿ 2 ವರ್ಷ ಸೇವೆ ಕಡ್ಡಾಯಗೊಳಿಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ಇತ್ಯರ್ಥಗೊಳಿಸಿದೆ.

### ■ ಕೆ.ಆರ್.ನಗರದಲ್ಲಿ ರೈತರಿಬ್ಬರ ಆತ್ಮಹತ್ಯೆ

**ಭೇರ್ಯ:** ಸಾಲ ಬಾಧೆ ತಾಳದೆ ರೈತರಿಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಕೆ.ಆರ್.ನಗರ ತಾಲೂಕಲ್ಲಿ ನಡೆದಿದೆ. ಸಾಲಿಗ್ರಾಮ ಹೋಬಳಿಯ ಹೆಬ್ಬೂರು ಗ್ರಾಮದ ಯುವ ರೈತ ಜಗದೀಶ (35) ಎಂಬಾತ ಮಂಗಳವಾರ ಬೆಳಗ್ಗೆ ತನ್ನ ಜಮೀನಿನಲ್ಲಿ ವಿಷ ಸೇವಿಸಿ ಮೃತಪಟ್ಟಿದ್ದಾರೆ. ಜಗದೀಶಗೆ 1.10 ಎಕರೆ ಜಮೀನಿದ್ದು, ಈತ ಕೃಷಿಗಾಗಿ ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ 2.75 ಲಕ್ಷ ಹಾಗೂ ಖಾಸಗಿಯರಿಂದ 2.25 ಲಕ್ಷ ರೂ. ಸಾಲ ಪಡೆದಿದ್ದರು. ಬೆಳೆನಷ್ಟ ಹಾಗೂ ಬೆಲೆ ಕುಸಿತದಿಂದ ಕಂಗಾಲಾಗಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದೇ ವೇಳೆ, ಚುಂಚನಕಟ್ಟೆ ಹೋಬಳಿ ಕರ್ತಾಳು ಗ್ರಾಮದ ವಿಜಯಕುಮಾರ್ (45) ಎಂಬ ರೈತ ಸೋಮವಾರ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದ. ಈತನನ್ನು ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಮಂಗಳವಾರ ಬೆಳಗ್ಗೆ ಮೃತಪಟ್ಟಿದ್ದಾನೆ. ವಿಜಯಕುಮಾರ್‌ಗೆ 3.20 ಎಕರೆ ಕೃಷಿ ಜಮೀನು ಹೊಂದಿದ್ದು, ಹನಸೋಗೆ ಗ್ರಾಮದ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್‌ನಲ್ಲಿ 60 ಸಾವಿರ ರೂ. ಸಾಲ ಪಡೆದಿದ್ದರು. ಬ್ಯಾಂಕ್‌ನಿಂದ ನೋಟಿಸ್ ಬಂದಿತ್ತು. ಅಲ್ಲದೇ, ಖಾಸಗಿಯವರಿಂದಲೂ 4 ಲಕ್ಷ ರೂಪಾಯಿಗೂ ಹೆಚ್ಚುಕ್ಕೈ ಸಾಲ ಮಾಡಿದ್ದರು.

## ರಾಮಚಂದ್ರಾಪುರದಲ್ಲಿ ವಿಜೃಂಭಣೆಯ ರಥೋತ್ಸವ

**ಬೆಂಗಳೂರು:** ರಾಮನವಮಿ ಪ್ರಯುಕ್ತ ನಡೆಯುವ ರಾಮಚಂದ್ರಾಪುರ ಮಠದ ಶ್ರೀ ಮನ್ಮಹಾರಥೋತ್ಸವ ಮಂಗಳವಾರ ಹೊಸನಗರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಬೆಳಗ್ಗೆ ಆರಂಭವಾದ ಧಾರ್ಮಿಕ ವಿಧಿ-ವಿಧಾನಗಳು ಮಧ್ಯಾಹ್ನದವರೆಗೆ ನಡೆದು 12.30ಕ್ಕೆ ಸಂಪನ್ನಗೊಂಡಿತು. ನಂತರ ಶ್ರೀರಾಮನ ರಥೋತ್ಸವ ಜರುಗಿತು. ಸಾವಿರಾರು ಭಕ್ತರ ಮಧ್ಯೆ ಶ್ರೀರಾಮನನ್ನು ಹೊತ್ತ ರಥ ಸಾಗಿಬಂತು. ರಾಮನ ದರ್ಶನ ಪಡೆದ ಭಕ್ತರು ಭಾವಪರವಶರಾದರು.



**ಹೊಸನಗರದ ರಾಮಚಂದ್ರಾಪುರ ಮಠದ ರಾಮೋತ್ಸವದಲ್ಲಿ ನೀಡಲಾಗುವ 'ಶ್ರೀಮಾತಾ ಪ್ರಶಸ್ತಿ'ಯನ್ನು ಲೇಖಕಿ ಸುಧಾಮೂರ್ತಿ ಅವರಿಗೆ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಪ್ರದಾನ ಮಾಡಿದರು.**

ರಾಜ್ಯದ ವಿವಿಧೆಡೆಯಿಂದ ಹರಿದುಬಂದಿದ್ದ ಭಕ್ತರು ರಾಮನಿಗೆ ವಿಶೇಷ ಪೂಜೆ ಸಲ್ಲಿಸಿದರು. ತಾಲ್ಲೂಕಿನ ವಿವಿಧ ಜಾತಿ-ಜನಾಂಗದ ಮುಖಂಡರು ಭಾಗವಹಿಸಿದ್ದರು.

**ಪ್ರಶಸ್ತಿ ಪ್ರದಾನ:** ಇದೇ ಸಂದರ್ಭದಲ್ಲಿ ಪ್ರತಿ ವರ್ಷ ರಾಮನವಮಿ ಪ್ರಯುಕ್ತ ನೀಡಲಾಗುವ ಪ್ರತಿಷ್ಠಿತ 'ಶ್ರೀಮಾತಾ' ಪ್ರಶಸ್ತಿಯನ್ನು ಲೇಖಕಿ ಸುಧಾಮೂರ್ತಿ ಅವರಿಗೆ ಹಾಗೂ 'ಪುರುಷೋತ್ತಮ' ಪ್ರಶಸ್ತಿಯನ್ನು ಉದ್ಯಮಿ ವಿಜಯ ಸಂಕೇಶ್ವರ ಅವರಿಗೆ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಪ್ರದಾನ ಮಾಡಿದರು.

**ಭಾರಿ ವಂಚನೆ** ■ ನರೇಗಾ ಯೋಜನೆಯ ಕರ್ಮಕಾಂಡ ಬಯಲು ■ ರಾಜ್ಯದ 760 ಗ್ರಾಪಂಗಳ ತನಿಖೆಗೆ ನಿರ್ದೇಶನ

# ಜನಸಂಖ್ಯೆಗಿಂತ ಹೆಚ್ಚಿದೆ ಉದ್ಯೋಗ ಖಾತ್ರಿ ಕಾರ್ಡ್!

■ **ಹಣಮಂತರಾವ ಭೈರಾಮಡಗಿ**

**ಗುಲ್ಬರ್ಗ:** ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನದಲ್ಲಿ ಜನಸಂಖ್ಯೆಗಿಂತ ಹೆಚ್ಚಿನ ಬೋಗಸ್ ಜಾಬ್ ಕಾರ್ಡ್ ಸೃಷ್ಟಿಸಿರುವ ಗ್ರಾಪಂಗಳನ್ನು ತನಿಖೆಗೆ ಒಳಪಡಿಸಿ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧಾರ ಕೈಗೊಂಡಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಎಲ್ಲ ಜಿಪಂಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ ಇಲಾಖೆ ಆಯುಕ್ತರು ನಿರ್ದೇಶನ ನೀಡಿದ್ದಾರೆ.

**ರಾಜ್ಯದಲ್ಲಿ ಎಷ್ಟು?:** ರಾಜ್ಯದಲ್ಲಿ 5621 ಗ್ರಾಪಂಗಳಿದ್ದು, ಇದರಲ್ಲಿ 760ಕ್ಕೂ ಹೆಚ್ಚು ಗ್ರಾಪಂಗಳಲ್ಲಿ ಜನಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬೋಗಸ್ ಜಾಬ್ ಕಾರ್ಡ್ ಸೃಷ್ಟಿಸಲಾಗಿದೆ ಎಂಬ ಮಾಹಿತಿಯಿದ್ದು, ಈ ಗ್ರಾಪಂಗಳನ್ನು ತನಿಖೆಗೊಳಪಡಿಸಬೇಕು. ಬೋಗಸ್ ಕಾರ್ಡ್ ರದ್ದುಗೊಳಿಸಬೇಕು. ತಪ್ಪಿತಸ್ಥ ಅಧಿಕಾರಿಗಳು, ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ



ವಾರದ ಆಯುಕ್ತ ಮೌನೀಷ ಮೌದ್ಗಿಲ್ ರಾಜ್ಯದ ಎಲ್ಲ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ನಿರ್ದೇಶನದ ಆದೇಶದೊಂದಿಗೆ ಜನಸಂಖ್ಯೆಗಿಂತ ಹೆಚ್ಚಿನ ಜಾಬ್‌ಕಾರ್ಡ್ ಹೊಂದಿರುವ ಗ್ರಾಪಂಗಳ ಪಟ್ಟಿಯನ್ನು ಸಹ ಲಗತಿಸಲಾಗಿದೆ. ಬೋಗಸ್ ಕಾರ್ಡ್ ಸೃಷ್ಟಿಸಿ ಅವ್ಯವಹಾರ ಎಸಗಿರುವ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದರ ಜತೆಗೆ ಅದರ ಮೇಲಿನ ಅನುಪಾಲನಾ ವರದಿಯನ್ನು ಶೀಘ್ರದಲ್ಲಿಯೇ ಆಯುಕ್ತಾಲಯಕ್ಕೆ ಸಲ್ಲಿಸುವಂತೆ ತಾಕೀತು ಮಾಡಲಾಗಿದೆ.

**ತನಿಖೆಗೆ ತಂಡ:** ಲೋಕಸಭಾ ಚುನಾವಣೆ ಮತದಾನ ಪ್ರಕ್ರಿಯೆ ಮುಗಿದ ಆಯಾ ತಾಪಂ ಕಾರ್ಯಕ್ರಮಾಧಿಕಾರಿಗಳ ನೇತೃತ್ವದ ತಾಲೂಕು ಮಟ್ಟದ ತಂಡ ರಚಿಸಿ ತನಿಖೆಗೆ ಒಳಪಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಗುಲ್ಬರ್ಗ ಜಿಲ್ಲೆಯ 220 ಗ್ರಾಪಂಗಳ ಪೈಕಿ 100 ಗ್ರಾಪಂಗಳಲ್ಲೂ ಬೋಗಸ್ ಜಾಬ್ ಕಾರ್ಡ್ ಸೃಷ್ಟಿಸಲಾಗಿದೆ ಎಂಬ ದೂರಿದೆ. ಅವುಗಳ ತನಿಖೆ ನಡೆಸಲಾಗುವುದು ಎಂದು ಉದ್ಯೋಗ ಖಾತ್ರಿ ಜಿಲ್ಲಾ ಅನುಷ್ಠಾಧಿಕಾರಿ ಹಾಗೂ ಜಿಪಂ ಮುಖ್ಯ ಲೆಕ್ಕಾಧಿಕಾರಿ ಹೊನ್ನಲಿಂಗಪ್ಪ 'ಉದಯವಾಣಿ'ಗೆ ತಿಳಿಸಿದ್ದಾರೆ. ಕಳೆದ 3 ತಿಂಗಳ ಹಿಂದೆ 25 ಸಾವಿರಕ್ಕಿಂತ ಹೆಚ್ಚಿನ ಮಾನವ ದಿನಗಳ ಉದ್ಯೋಗ ಸೃಷ್ಟಿಸಿದ ಮತ್ತು ಬರೀ ಯಂತ್ರಗಳನ್ನೇ ಬಳಸಿದ ರಾಜ್ಯದ 273 ಗ್ರಾಪಂಗಳ ತನಿಖೆ ಸರ್ಕಾರ ಆದೇಶಿಸಿತ್ತು. ಅದರ ತನಿಖೆ ಜನವರಿಯಲ್ಲಿ ಆರಂಭವಾಗಿದ್ದು, ಇನ್ನೂ ಪ್ರಗತಿಯಲ್ಲಿದೆ. ಆ ತನಿಖೆಯಲ್ಲಿ ಅವ್ಯವಹಾರ ನಡೆಸಿವೆ ಎಂಬುದು ಬೆಳಕಿಗೆ ಬಂದ 64ಗ್ರಾಪಂಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ. ಇದೀಗ ಜಾಬ್ ಕಾರ್ಡ್ ಬೋಗಸ್ ಸೃಷ್ಟಿಸಿದ್ದಕ್ಕೆ ಪ್ರತ್ಯೇಕವಾಗಿ ತನಿಖೆಗೆ ನಿರ್ದೇಶನ ನೀಡಿರುವುದು ಗ್ರಾಪಂಗಳ ನಿದ್ದೆಗೆಡಿಸಿದಂತಾಗಿದೆ.

### ತನಿಖೆಗೆ ನಿರ್ದೇಶನ

**ರಾಜ್ಯದ ಹಲವು ಗ್ರಾಪಂಗಳಲ್ಲಿ 2011ರ ಜನಗಣತಿಯ ಜನಸಂಖ್ಯೆಗಿಂತ ಹೆಚ್ಚು ಕೂಲಿ ಕಾರ್ಮಿಕರ ಹೆಸರುಗಳು ಉದ್ಯೋಗ ಖಾತ್ರಿ ಯೋಜನೆ ಜಾಬ್ ಕಾರ್ಡ್ ಪಟ್ಟಿಯಲ್ಲಿರುವುದರಿಂದ ತನಿಖೆಗೆ ಆದೇಶಿಸಲಾಗಿದೆ. ಅಲ್ಲದೇ ಬೋಗಸ್ ಕಾರ್ಡು ರದ್ದುಪಡಿಸಲು ಹಾಗೂ ಸೂಕ್ತ ಕ್ರಮಕ್ಕೂ ನಿರ್ದೇಶನ ನೀಡಲಾಗಿದೆ.**

■ **ಮೌನೀಷ್ ಮೌದ್ಗಿಲ್,** ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ